**ಅಸಲು ದಾವಾ. ನಂಃ 15/2019**

**ಪಿಡಬ್ಲೂ – 1**

**ಸಾಕ್ಷಿಯನ್ನು ದಿನಾಂಕಃ 21.01.2025 ರಂದು ಕರೆಯಿಸಿ,ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂ. 7 ಮತ್ತು 8 ರ ಪರ ಶ್ರೀ ಪಿ ಕೆ ಯು ವಕೀಲರಿಂದಃ**

1. ದಾವಾ ಸ್ವತ್ತಿನ ಸರ್ವೆ ನಂಬರ 13/1, 3 ಎಕರೆ 14 ಗುಂಟೆ, ಸರ್ವೆ ನಂಬರ 16/1, 2 ಎಕರೆ 14 ಗುಂಟೆ ಸ್ವತ್ತಿಗೆ ದಾವೆ ಸಲ್ಲಿಸಿದ್ದೇನೆ. ದಾವಾ ಸ್ವತ್ತುಗಳು ಮೂಲತಃ ನನ್ನ ಅಜ್ಜ ಭೀಮಪ್ಪರವರಿಗೆ ಸೇರಿದ ಸ್ವತ್ತುಗಳು. ಭೀಮಪ್ಪನಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಸದರಿ ಸ್ವತ್ತು ಗೌರಮ್ಮರವರ ತಂದೆ ಪಕ್ಕಿರಪ್ಪರವರಿಂದ ಗೌರಮ್ಮಳಿಗೆ ಬಂದಿರುತ್ತದೆ. ದಾವಾ ಸ್ವತ್ತುಗಳು ಮೂಲತಃ ಪಕ್ಕಿರಪ್ಪರವರಿಗೆ ಸೇರಿದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ.

2. ಪಕ್ಕಿರಪ್ಪನ ತಂದೆಯ ಹೆಸರು ಗೊತ್ತಿಲ್ಲ. ಸದರಿ ಸ್ವತ್ತು ಪಕ್ಕಿರಪ್ಪ ಸೇರಿದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ದಾವೆಯನ್ನು ಸಲ್ಲಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಗೌರಮ್ಮಳಿಗೆ ಯಾವ ರೀತಿ ಬಂದಿದೆ ಎಂದು ವಾದ ಪತ್ರದಲ್ಲಿ ತಿಳಿಸಿಲ್ಲ . ಗೌರವ್ವಳ ಗಂಡನ ಹೆಸರು ಭೀಮಪ್ಪ. ಗೌರವ್ವ ಸುಮಾರು 25 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಭೀಮಪ್ಪ ಯಾವಾಗ ತೀರಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ಬೀಮಪ್ಪ ಮತ್ತು ಗೌರವ್ವ ಯಾವಾಗ ತೀರಿಕೊಂಡಿದ್ದಾರೆ ಎಂದು ದಾವೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ನನ್ನ ದಾವೆಯಲ್ಲಿ ಮೂಲ ಪುರುಷ 69 ವರ್ಷಗಳ ಹಿಂದೆ ಮೃತ ಪಟ್ಟಿದ್ದಾನೆ ಎಂದು ತಿಳಿಸಿದ್ದೇನೆ ಎಂದರೆ ಸರಿ.

3. ಭೀಮಪ್ಪ ಮತ್ತು ಗೌರವ್ವರವರಿಗೆ ಪಕ್ಕಿರಪ್ಪ, ಯಲ್ಲಪ್ಪ ಮತ್ತು ಸಕ್ರಪ್ಪ ಅಂತಾ ಮೂರು ಜನ ಮಕ್ಕಳು. ನಾನು ನನ್ನ ದಾವಾ ಪತ್ರದ ಪ್ಯಾರಾ ನಂಬರ 7 ರಲ್ಲಿ ಬರೆದ ಸಂಗತಿಗಳು ಸರಿ ಇರುತ್ತದೆ. ಸದರಿ ವಿಭಾಗ 1983 ರಲ್ಲಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಭಾಗದಲ್ಲಿ ಸರ್ವೆ ನಂಬರ 7/3, 13/1 ಜಂಟಿಯಾಗಿ ಪಕ್ಕಿರಪ್ಪ ಮತ್ತು ಯಲ್ಲಪ್ಪರವರಿಗೆ ಹೋಗಿತ್ತು ಎಂದರೆ ಸರಿ. ಸರ್ವೆ ನಂಬರ 16/1, 5 ನೇ ಪ್ರತಿವಾದಿ ಶಂಕ್ರವ್ವರಿಗೆ ನೀಡಿದ್ದರು ಎಂದರೆ ಸರಿ . ಸದರಿ ಭಾಗದ ಪ್ರಕಾರ ಮೇಲ್ಕಂಡ ಮೂರು ಜನರು ಮತ್ತು ಅವರ ತಾಯಿ ವರದಿ ನೀಡಿದ ಮೇರೆಗೆ ಡ. ನಂಬರ 176 ನಮೂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ.

4. ನ್ಯಾಯಾಲಯಕ್ಕೆ ದಾಖಲೆಗಳನ್ನು ನಾನೇ ಪಡೆದು ಸಲ್ಲಿಸಿರುತ್ತೇನೆ. ಅದೇ ರೀತಿ ಪಕ್ಕಿರಪ್ಪ ಯಲ್ಲಪ್ಪ ಮೇಲ್ಕಂಡ ಸ್ವತ್ತುಗಳಿಗೆ ಜಂಟಿಯಾಗಿ ಮಾಲೀಕರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಶಂಕ್ರವ್ವ ತನ್ನ ಪಾಲಿಗೆ ಬಂದ ಆಸ್ತಿಗೆ ಮಾಲೀಕರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ 1983 ನೇ ಪಹಣಿ ಪತ್ರಿಕೆಯಲ್ಲಿ ಪಕ್ಕಿರಪ್ಪ ಮತ್ತು ಯಲ್ಲಪ್ಪರವರ ಹೆಸರು ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ನನಗೆ 2018 ರಲ್ಲಿ ತಿಳಿಯಿತು. ನಿಖರವಾದ ದಿನಾಂಕ ಗೊತ್ತಿಲ್ಲ. ನನ್ನ ತಂದೆ ತೀರಿಕೊಂಡ ನಂತರ ತಿಳಿಯಿತು. ಸದರಿ ದಾಖಲೆಗಳನ್ನು ಯಾವ ದಿನಾಂಕದಂದು ಪಡೆದಿದ್ದೇನೆ ಎಂದು ಗೊತ್ತಿಲ್ಲ. ನನ್ನ ತಂದೆ 2018 ರಲ್ಲಿ ತೀರಿಕೊಂಡಿದ್ದಾರೆ. ಯಲ್ಲಪ್ಪ ಯಾವಾಗ ತೀರಿಕೊಂಡಿದ್ದಾರೆ ಎಂದು ಗೊತ್ತಿಲ್ಲ.

5. ನಿಪಿ – 22 ನ್ನು ನಾನೇ ಹಾಜರು ಪಡಿಸಿದ್ದೇನೆ. ಸದರಿ ನಿಪಿ – 22 ನ್ನು ದಿಃ 18-02-2017 ರಲ್ಲಿ ಪಡೆದಿದ್ದೇನೆ ಎಂದರೆ ಸರಿ. ನಾನು ಉದ್ದೇಶಪೂರ್ವಕವಾಗಿ 2018 ರಲ್ಲಿ ನನಗೆ ಮಾಹಿತಿ ತಿಳಿಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂಬರ 6 ರಿಂದ 16 ರವರನ್ನು ಆಸ್ತಿಯನ್ನು ಖರೀದಿಸಿರುವುದರಿಂದ ಪಕ್ಷಗಾರರನ್ನಾಗಿ ಮಾಡಿದ್ದೇನೆ. 18-02-1994 ರಲ್ಲಿ ಯಲ್ಲಪ್ಪ ಮತ್ತು ಪಕ್ಕಿರಪ್ಪ ಪ್ರತಿವಾದಿ ನಂಬರ 6 ರಿಂದ 9 ರವರ ತಂದೆಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 13/1 ರ ಪೈಕಿ 1 ಎಕರೆ 1 ಗುಂಟೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ದಿನ ಅಂದರೆ 18-02-1994 ರಲ್ಲಿ ಸರ್ವೆ ನಂಬರ 13/1 ರ ಪೈಕಿ ಉಳಿದ 1 ಎಕರೆ 12 ಗುಂಟೆ ಸ್ವತ್ತನ್ನು ಯಲ್ಲಪ್ಪ ಮತ್ತು ಪಕ್ಕಿರಪ್ಪ ಪ್ರತಿವಾದಿ ನಂಬರ 6 ರಿಂದ 16 ರವರ ಹಿರಿಯರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ತೀರಿಕೊಂಡ ನಂತರ ತಿಳಿಯಿತು ಎಂದು ನುಡಿಯುತ್ತಾರೆ.

6. ಸದರಿ ಮಾರಾಟ ಮಾಡಿರುವ ವಿಚಾರ ನನ್ನ ತಂದೆ ಜೀವಂತ ಇದ್ದಾಗ ತಿಳಿದಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಇದ್ದಾಗ ಮೇಲ್ಕಂಡ ಖರೀದಿ ಪತ್ರಗಳನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ . ಮೇಲ್ಕಂಡ ಸ್ವತ್ತುಗಳಿಗೆ ಸಂಬಂದಿಸಿದಂತೆ ಖರೀದಿ ಪತ್ರದ ಆಧಾರದ ಮೇಲೆ ಪ್ರತಿವಾದಿ ನಂಬರ 6 ರಿಂದ 16 ರವರ ಹಿರಿಯರಾದ ವಲ್ಲಬದಾಸರವರ ಹೆಸರಿಗೆ ಡ. ನಂಬರ 267 ರ ಪ್ರಕಾರ ನಮೂದು ಆಗಿತ್ತು ಎಂದರೆ ಸರಿ. ಸದರಿ ವಿಷಯ ನಿಪಿ – 9 ರಲ್ಲಿ ನಮೂದು ಆಗಿದೆ ಎಂದರೆ ಸರಿ. ಮೇಲ್ಕಂಡ ಕಂದಾಯ ದಾಖಲೆಗಳನ್ನು ನನ್ನ ತಂದೆ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. 5 ನೇ ಪ್ರತಿವಾದಿಯು ಸಹ ಮೇಲ್ಕಂಡ ದಾಖಲೆಗಳನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ.

7. ಪ್ರತಿವಾದಿಗಳ ತಂದೆ ಖರೀದಿಸಿರುವ ಸ್ವತ್ತಿನಲ್ಲಿ ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ನಾವು ಉಳುಮೆ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾವು ಉಳುವೆ ಮಾಡುವ ಬಗ್ಗೆ ದಾಖಲೆಗಳು ಇಲ್ಲ. ಸದರಿ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಕೊಟ್ಟಿರುವ ವಿಚಾರ ನನಗೆ 1994 ರಲ್ಲಿ ತಿಳಿದಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತು ಸರ್ವೆ ನಂಬರ 13/1, ಮತು 16/1ರ ಸ್ವತ್ತುಗಳನ್ನು 2009 ರಲ್ಲಿ ಬಿನ್ ಶೇತ್ಕಿ ಮಾಡಿಸಿದ್ದಾರೆ ಎಂದರೆ ಗೊತ್ತಿಲ್ಲ. 1994 ರಿಂದ ಪ್ರತಿವಾದಿಗಳ ಸ್ವಾಧೀನದಲ್ಲಿ ಇದ್ದಿದ್ದರಿಂದ ನನಗೆ ಮಾಹಿತಿಯಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ಬಿನ್ ಶೇತ್ಕಿ ಅಂತಾ ಇದೆ ಎಂದರೆ ಸರಿ. ದಾವಾ ಸ್ವತ್ತುಗಳು ಕಿಮ್ಮತ್ತು ಹೆಚ್ಚಾಗಿದ್ದರಿಂದ ಅವರಿಂದ ಅಕ್ರಮ ಲಾಭ ಪಡೆಯುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ ದಾವಾ ಸ್ವತ್ತುಗಳ ಮೇಲೆ ನನಗೆ ಮತ್ತು ಇತರೇ ವಾದಿಗಳಿಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿಯಿಲ್ಲ ಎಂದರೆ ಸರಿಯಲ್ಲ.

8. ವಲ್ಲಬದಾಸರವರು ಯಲ್ಲಪ್ಪ ಮತ್ತು ಪಕ್ಕಿರಪ್ಪರವರ ಮಾಲೀಕತ್ವವನ್ನು ಪರಿಶೀಲಿಸಿ ಸದ್ಭಾವಣೆಯಿಂದ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಖರೀದಿಯಾದ ದಿನಾಂಕದಿಂದ 3 ವರ್ಷದೊಳಗೆ ನಾನು ಮತ್ತು ನನ್ನ ತಂದೆ ಹಾಗೂ ಇತರೇ ವಾದಿಗಳು ಕ್ರಯ ಪತ್ರ ಪ್ರಶ್ನಿಸಿ ದಾವೆ ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯನ್ನು ಸಲ್ಲಿಸಲು ನಮಗೆ ಯಾವುದೇ ಅಧಿಕಾರವಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಹೊರತುಪಡಿಸಿ ಇತರೇ ಜಮೀನು, ಬಯಲು ಜಾಗ ಮತ್ತು ಮನೆಗಳು ಇವೆ ನನ್ನ ತಂದೆಗೆ ಇವೆ ಎಂದರೆ ಸಾಕ್ಷಿಯು ಮನೆ ಮಾತ್ರ ಇದೆ ಎಂದು ನುಡಿಯುತ್ತಾರೆ. ಸದರಿ ಮನೆ ನಂಬರ 49 ಸಿ.

9. ಅದೇ ರೀತಿ ಪಕ್ಕಿರಪ್ಪ ಮತ್ತು ಯಲ್ಲಪ್ಪರವರಿಗೆ ಸರ್ವೆ ನಂಬರ 7/3 ಸಹ ಪಾಲುವಾಟ್ನೆಯಲ್ಲಿ ಬಂದಿತ್ತು ಎಂದರೆ ಸರಿ. ಸದರಿ ಮನೆ ಮತ್ತು ಜಮೀನುಗಳನ್ನು ಸ್ವತ್ತಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಮೇಲ್ಕಂಡ ಆಸ್ತಿಗಳನ್ನು ಹೊರತುಪಡಿಸಿ ಕೇವಲ ಮಾರಾಟ ಮಾಡಿರುವ ಸ್ವತ್ತುಗಳಿಗೆ ಸಂಬಂದಿಸಿದಂತೆ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)***

ಓ. ಹೇ. ಕೇ. ಸರಿ ಅದೆ.

-ಸಹಿ-

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.